ಆದು ಕೋರ್ಟ್‌ನಲ್ಲಿ ವಾದ ವಿವಾದ ಇದ್ದ ಕಾರಣ ಆ ಸ್ಥಳ ಕೊಡುವುದಕ್ಕೆ ಆಗುವುದಿಲ್ಲ. ಸ್ಟೇಡಿಯಂ ಕಟ್ಟಬೇಕಾದರೆ ಅಸಿಸ್ಟೆಂಟ್ ಕಮೀಷನರ್‌ರವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ಇದೆ. ಆ ಕಮಿಟಿಯವರು ನಿರ್ಣಯ ಮಾಡಿ ಸರ್ಕಾರಿ ಭೂಮಿ ಇಲ್ಲದಿದ್ದರೆ ಬೇರೆ ಸ್ಥಳ ಹುಡುಕಬೇಕಾಗಿದೆ. ಪ್ರೈವೇಟ್ ಲ್ಯಾಂಡ್ ಖರೀದಿ ಮಾಡಲಿಕ್ಕೆ ಪ್ರಸ್ತಾವನೆಯನ್ನು ಕಳುಹಿಸಿದರೆ ಅದನ್ನು ಸರ್ಕಾರ ಪರಿಶೀಲನೆ ಮಾಡುತ್ತದೆ.

ಶ್ರೀ ಪ್ರಕಾಶ್ ಖಂಡ್ರೆ : ಮಾನ್ಯ ಅಧ್ಯಕ್ಷರೇ, ಸರ್ಕಾರಿ ಜಮೀನು ಇದೆ ಆ ಜಮೀನು ತೆಗೆದುಕೊಳ್ಳುವುದಕ್ಕೆ ಕ್ರಮ ತೆಗೆದುಕೊಳ್ಳದೆ, ಪ್ರೈವೇಟ್ ಜಮೀನು ತೆಗೆದುಕೊಳ್ಳಬೇಕು, ದಾನಿಗಳ ಕಡೆಯಿಂದ ತೆಗೆದುಕೊಳ್ಳಬೇಕೆಂದರೆ ಅದು ಆಗುವುದಿಲ್ಲ. ನಾವು ಕ್ರೀಡಾಪಟುಗಳಿಗೆ ಸ್ಟೇಡಿಯಂ ವ್ಯವಸ್ಥೆ ಮಾಡಿದರೆ ನಮ್ಮ ದೇಶದಲ್ಲಿ ಒಳ್ಳೊಳ್ಳೆಯ ಕ್ರೀಡಾಪಟುಗಳು ಹರಿದುಬರುತ್ತಾರೆ. ಇಲ್ಲದಿದ್ದರೆ ಅವರು ಕೆಟ್ಟ ಚಟಗಳಿಗೆ ಹೋಗುತ್ತಾರೆ. ನಮ್ಮ ತಾಲ್ಲೂಕಿನಲ್ಲಿ 35-40 ಸಾವಿರ ಜನಸಂಖ್ಯೆ ಇರುವುದರಿಂದ ಸ್ಟೇಡಿಯಂ ಕಟ್ಟುವುದು ಬಹಳ ಜರೂರು ಇದೆ. ಸರ್ವೆ ನಂ. 411ರಲ್ಲಿ ಸರ್ಕಾರಿ ಜಮೀನು ಇದೆ, ಆ ಜಮೀನನ್ನು ವಶಪಡಿಸಿಕೊಳ್ಳುವುದಕ್ಕೆ ಪ್ರಯತ್ನ ಪಡದಿದ್ದರೆ ಬೇರೇನು ಮಾಡುವುದಕ್ಕೆ ಸಾಧ್ಯವಿದೆ?

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ : ಸರ್ವೆ ನಂ. 411 ರ ಬಗ್ಗೆ ಕೋರ್ಟ್‌ನಲ್ಲಿ ವ್ಯಾಜ್ಯವಿದೆ. ಕೋರ್ಟ್ ತೀರ್ಮಾನವಾಗುವವರೆಗೆ ನಾವೇನೂ ಮಾಡುವುದಕ್ಕೆ ಬರುವುದಿಲ್ಲ, ಅದು ತಮಗೆ ಗೊತ್ತಿದೆ. ಕೋರ್ಟ್ ತೀರ್ಮಾನವಾದ ಕೂಡಲೇ ಕ್ರಮ ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ.

ಮಂಗಳೂರು-ತಾಲ್ಲೂಕಿನಲ್ಲಿ ಗಣಕೀಕೃತ ಪಹಣಿ ದಾಖಲಾತಿ ವಿತರಣೆಯಲ್ಲಿ ವಿಳಂಬವಾಗಿರುವುದು

149(480) - ಶ್ರೀ ಅಭಯಚಂದ್ರ ಕೆ. (ಮೂಡಬಿದ್ರೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರು ತಾಲ್ಲೂಕಿನಲ್ಲಿ ಗಣಕೀಕರಣದ ಪಹಣಿ, ದಾಖಲಾತಿ ಪ್ರಾರಂಭ-ಗೊಂಡಾಗಿನಿಂದ ದಾಖಲೆ ಕಾರ್ಯದಲ್ಲಿ ವಿಳಂಬವಾಗುತ್ತಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿರುವುದೇ;

ಆ) ವಿಳಂಬಕ್ಕೆ ಕಾರಣವೇನು;

ಇ) ಕಾರ್ಯ ಚುರುಕುಗೊಳಿಸಲು ಏನು ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು):

ಅ) ಹೌದು.

ಆ) ಮಂಗಳೂರು ಒಂದು ದೊಡ್ಡ ತಾಲ್ಲೂಕಾಗಿದ್ದು, 3.32 ಲಕ್ಷ ಪಹಣಿಗಳಿರುತ್ತವೆ. ಪ್ರತಿ ದಿನ 100-150 ಖಾತೆ ಬದಲಾವಣೆ ಕೋರಿ ಮುಟೇಶನ್ ಅರ್ಜಿ ಬರುತ್ತಿದ್ದು, ಕಡಿಮೆ ಸಂಖ್ಯೆಯ ಗಣಕಯಂತ್ರಗಳಿಂದಾಗಿ ಗಣಕೀಕರಣ ಕಾರ್ಯದಲ್ಲಿ ವಿಳಂಬವಾಗಿರುತ್ತದೆ.

ಇ) ಈಗಿರುವ ಮೂರು ಗಣಕಯಂತ್ರಗಳೊಂದಿಗೆ ಸರ್ಕಾರವು ಎರಡು ಹೆಚ್ಚುವರಿ ಗಣಕಯಂತ್ರಗಳನ್ನು ಪೂರೈಸಿದೆ. ಬಾಕಿ ಇರುವ ದಾಖಲೆಗಳನ್ನು ಇಂದೀಕರಿಸಲು ತಾತ್ಕಾಲಿಕವಾಗಿ ಇನ್ನೂ ನಾಲ್ಕು ಗಣಕಯಂತ್ರಗಳನ್ನು ವ್ಯವಸ್ಥೆ ಮಾಡಲಾಗಿದೆ. ಕಾರ್ಯವನ್ನು ಚುರುಕುಗೊಳಿಸಲು ಒಬ್ಬ ಹೆಚ್ಚುವರಿ ತಹಶೀಲ್ದಾರರು ನೇಮಕಗೊಂಡಿರುತ್ತಾರೆ.

ಶ್ರೀ ಕೆ. ಅಭಯಚಂದ್ರ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಉತ್ತರವನ್ನು ಒದಗಿಸಿದ್ದಾರೆ. ಆದರೆ ಮಂಗಳೂರು ಅತಿ ದೊಡ್ಡ ತಾಲ್ಲೂಕು ಕೇಂದ್ರವಾಗಿದೆ. ಐದು ಜನ ಶಾಸಕರಿಗೆ ಒಬ್ಬರು ತಹಶೀಲ್ದಾರ್ ಇದ್ದಾರೆ. ಮೂರು ಕಂಪ್ಯೂಟರ್‌ಗಳು ಇವೆ. ಆರ್‌ಟಿಸಿ ಬದಲಾವಣೆಗೆ ಹೋದರೆ ಕನಿಷ್ಟ ಆರು ತಿಂಗಳು ಆಗುತ್ತದೆ. ಅದನ್ನು ಚುರುಕುಗೊಳಿಸುವ ಕೆಲಸ ಮಾಡಬೇಕಾಗುತ್ತದೆ. ಎರಡು ಹೆಚ್ಚುವರಿ ಕಂಪ್ಯೂಟರ್‌ಗಳನ್ನು ಒದಗಿಸಲಾಗಿದೆಯೆಂದು ಹೇಳಿದ್ದಾರೆ. ಮೂಡಬಿದಿರೆಗೆ ಉಪ ತಹಶೀಲ್ದಾರ್‌ರವರನ್ನು ನೇಮಿಸಿದ್ದಾರೆ.

12.10 ಪಿ.ಎಂ.

ನಮ್ಮ ಮೂಡಬಿದ್ರಿಗೆ ಒಂದು ಕಂಪ್ಯೂಟರ್, ಮುಲ್ಕಿಯ ಉಪ-ತಹಶೀಲ್ದಾರ್ ಅವರ ಕಚೇರಿಗೆ ಒಂದು ಕಂಪ್ಯೂಟರ್‌ನ್ನು ಒದಗಿಸಿದರೆ ಕೆಲಸ ಸ್ವಲ್ಪ ವೇಗವಾಗಿ ಆಗುತ್ತದೆ. ಆದ್ದರಿಂದ ಮಾನ್ಯ ಕಂದಾಯ ಸಚಿವರು ಸಹಕರಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ : ಸನ್ಮಾನ್ಯ ಅಧ್ಯಕ್ಷರೇ, ಮಂಗಳೂರು ತಾಲ್ಲೂಕು ಬಹಳ ಅತಿ ದೊಡ್ಡ ತಾಲ್ಲೂಕು. ಇದು ಸುಮಾರು ಆರು ಹೋಬಳಿಗಳನ್ನು ಒಳಗೊಂಡಿದ್ದು 3.32 ಲಕ್ಷ ಪಹಣಿಗಳು ಇಲ್ಲಿವೆ. ಪ್ರತಿದಿವಸ 100 ರಿಂದ 150 ಮ್ಯೂಟೇಶನ್ ಅರ್ಜಿಗಳು ವಿಲೇವಾರಿ ಮಾಡುವುದಕ್ಕೆ ಬರುತ್ತವೆ. ಇದಕ್ಕೆ ಸಾಕಷ್ಟು ಕಂಪ್ಯೂಟರ್‌ಗಳನ್ನು ಹಂಚಿಕೆ ಮಾಡಿ ಕೆಲಸವನ್ನು ಈಗಾಗಲೇ ಪ್ರಾರಂಭ ಮಾಡಿಸಿದ್ದೇವೆ. ಅರ್ಜಿಗಳ ವಿಲೇವಾರಿ ಕೆಲಸ ಈಗಾಗಲೇ ಬಹಳ ಜಾಗ್ರತೆಯಾಗಿ ಆಗುತ್ತಿದೆ.

ಶ್ರೀ ಕೆ. ಅಭಯಚಂದ್ರ : ಮಾನ್ಯ ಅಧ್ಯಕ್ಷರೇ, ಇದು ಏನಾಗಿದೆ ಎಂದರೆ ಮೂಡಬಿದ್ರೆ ಜನ ಹಿಂದೆ ಕಾರ್ಕಳ ತಾಲ್ಲೂಕಿನಲ್ಲಿ ಇದ್ದವರು. ಕಾರ್ಕಳ ತಾಲ್ಲೂಕಿನಿಂದ ಎಲ್ಲಾ ಕಡತಗಳು ಈಗ ಮಂಗಳೂರು ತಾಲ್ಲೂಕಿಗೆ ಬಂದಿವೆ. ಮೂಡಬಿದ್ರೆಯಿಂದ 50 ಕಿ.ಮೀ. ದೂರಕ್ಕೆ ಮಂಗಳೂರಿಗೆ ಹೋಗಬೇಕು. ಮಂಗಳೂರು ಜನರಿಗೆ ಈಗ ಆರು ತಿಂಗಳಾದರೂ ಪಹಣಿ ಸಿಗುತ್ತಿಲ್ಲ. ಇನ್ನು ಮೂಡಬಿದ್ರಿ ಜನರಿಗೆ ಒಂದು ವರ್ಷ ಕಾಯಬೇಕಾಗುತ್ತದೆ. ಆದ್ದರಿಂದ ಮೂಡಬಿದ್ರಿ ಉಪ-ತಹಸೀಲ್ದಾರ್ ಅವರ ಕಚೇರಿಗೂ ಕೂಡ ಗಣಕ ಯಂತ್ರವನ್ನು ಸರ್ಕಾರ ಒದಗಿಸಿದರೆ ಸ್ವಲ್ಪ ಕೆಲಸ ಸುಲಭವಾಗುತ್ತದೆ ಎಂದು ನನ್ನ ಬೇಡಿಕೆ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ : ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಕಿಯಾಕ್ಸ್ ಕೇಂದ್ರಗಳಲ್ಲಿ ಈಗ ಹೆಚ್ಚಿನ ಹಣ ಸಂಗ್ರಹವಾಗುತ್ತಿದೆ. ಏನು ಒಂದು ಪಹಣಿಗೆ 15 ರೂಪಾಯಿಗಳನ್ನು ತೆಗೆದುಕೊಳ್ಳುತ್ತಿದ್ದರೋ, ಅದರಿಂದ ಲಕ್ಷಾಂತರ ರೂಪಾಯಿಗಳ ಆದಾಯ ಬರುತ್ತಿದೆ. ಅದನ್ನು ಬೇರೆ ಹೋಬಳಿಗಳಿಗೂ ಸಹ ವಿಸ್ತರಿಸಿ ಅಲ್ಲೂ ಸಹ ಈ ಕೇಂದ್ರದಿಂದ ರೈತರಿಗೆ ಸಹಾಯ ಆಗುವ ರೀತಿಯಲ್ಲಿ ಮಾಡುತ್ತಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಮಂತ್ರಿಗಳಾದ ಶ್ರೀ ಶ್ರೀಕಂಠಯ್ಯನವರು ಕೆಲವು ತಾಲ್ಲೂಕುಗಳಲ್ಲಿ ಸ್ಥಳ ವೀಕ್ಷಣೆ ಮಾಡಿದರೆ ಚೆಲೋ ಆಗುತ್ತದೆ.

ಇವತ್ತು ಏನಾಗಿದೆ ಎಂದರೆ ರೈತರಿಗೆ ತೊಂದರೆಯಾಗುತ್ತಿದೆ. ಇವತ್ತು ಒಂದು ಸಲ ಬಂದು ಅಂದರೆ ಬೆಳಿಗ್ಗೆ ಬಂದು ಮಧ್ಯಾಹ್ನ ತೆಗೆದುಕೊಂಡು ಹೋದರೆ ಒಳ್ಳೆಯದು. ಆದರೆ ಅದು ಆಗುತ್ತಿಲ್ಲ. ಇವತ್ತು ಏನಾದರೂ ಆಕಸ್ಮಾತ್ ಕಂಪ್ಯೂಟರ್ ಕೆಟ್ಟರೆ ಅಥವಾ ಆಪರೇಟರ್ ಬಂದಿಲ್ಲವೆಂದರೆ ಅವರು ಎರಡು-ಮೂರು ದಿವಸ ಅಡ್ಡಾಡಬೇಕಾಗುತ್ತದೆ. ಒಂದು ಸಲ ಅವನು

ಬಂದುಹೋಗಬೇಕಾದರೆ ನೂರು ರೂಪಾಯಿಗಳು ಖರ್ಚಾಗುತ್ತದೆ. ಇದು ತನ್ನ ಹಳ್ಳಿಯಿಂದ ಅವನು ಇಲ್ಲಿಗೆ ಬಂದು ಹೋಗುವಂಥಾದ್ದು ಮತ್ತು ಚಾ ಇತ್ಯಾದಿಗಳಿಗೆ ಕನಿಷ್ಟ 80 ರಿಂದ 100 ರೂಪಾಯಿಗಳು ಖರ್ಚಾಗುತ್ತಿದೆ. ಇದರ ಜೊತೆಗೆ 15 ರೂಪಾಯಿಗಳ ಫೀ ಕೊಡಬೇಕು. ಮೊದಲು ತಲಾಟೆ ಮಾಡಿದ ಗಲಾಟೆ ಅಂತ ಹೇಳಿ ಜನ ಅವರಿಂದ ತ್ರಾಸ ಪಡುತ್ತಾರೆ ಎಂದು ಹೇಳಿ ಕಂಪ್ಯೂಟರ್ ವ್ಯವಸ್ಥೆಯನ್ನು ತಾವು ಮಾಡಿದ್ದೀರಿ. ಇದರ ಉದ್ದೇಶ ಒಳ್ಳೆಯದಿದೆ. ಆದರೆ ಈ ಉದ್ದೇಶ ಏನಿದೆ, ಇದು ಸಫಲತೆ ಕಾಣುತ್ತಿಲ್ಲ. ಅದಕ್ಕೆ ಈಗ 15 ರೂಪಾಯಿಗಳ ಫೀಸ್ ಇಟ್ಟಿದ್ದೀರಿ, ಇದನ್ನು ಕಡಿಮೆ ಮಾಡಿ ಐದು ರೂಪಾಯಿ ಮಾಡುವಂಥಾದ್ದು ಆಗಬೇಕು. ಈಗ ತಾಲ್ಲೂಕು ಮಟ್ಟದಲ್ಲಿ ಮಾಡಿದ್ದೀರಿ. ನಾಳೆ ಹೋಬಳಿ ಮಟ್ಟದಲ್ಲಿ ಮತ್ತು ದೊಡ್ಡ ದೊಡ್ಡ ಗ್ರಾಮಗಳ ಮಟ್ಟದವರೆಗೂ ಇದನ್ನು ವಿಸ್ತರಣೆ ಮಾಡಿದರೆ ಇವತ್ತು ಏನು ತಲಾಟೆಗಳ ಗದ್ದಲದಿಂದ ತೊಂದರೆ ಕೊಡುವುದನ್ನು ತಪ್ಪಿಸಿದ್ದರೆ ಇದರಿಂದ ಇನ್ನೂ ರೈತರಿಗೆ ಹೆಚ್ಚು ಅನುಕೂಲವಾಗುತ್ತದೆ. ತಾವು ಒಂದಿಷ್ಟು ಕಡೆ ವಿಸಿಟ್ ಮಾಡಿದರೆ ರೈತರ ಸಮಸ್ಯೆ ಏನು ಎಂಬುದು ತಮಗೆ ಗೊತ್ತಾಗುತ್ತದೆ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ : ನಾನು ಎಲ್ಲಾ ಕಡೆಗೆ ಹೋದಾಗ ತಾಲ್ಲೂಕು ಕೇಂದ್ರಗಳಲ್ಲಿ ಜನ ಕ್ಯೂ ನಿಂತಿರುತ್ತಾರೆ. ಬಹಳ ಜನ ಹುಮ್ಮಸ್ಸಿನಿಂದ ಬಂದು ಆರ್.ಟಿ.ಸಿ. ಗಳನ್ನು ಪಡೆಯುತ್ತಿದ್ದಾರೆ. ತಾವು ಹೇಳಿದಹಾಗೆ ಹದಿನೈದು ರೂಪಾಯಿಗಳನ್ನು ಪ್ರಥಮಹಂತದಲ್ಲಿ ಮಾಡಿದ್ದೇವೆ. ಮುಂದೆ ಕಡಿಮೆ ಮಾಡುವುದಕ್ಕೆ ಯೋಚನೆ ಮಾಡುತ್ತೇವೆ. ಹೋಬಳಿ ಕೇಂದ್ರಗಳಲ್ಲೂ ಈ ವ್ಯವಸ್ಥೆಯನ್ನು ಮಾಡಬೇಕಾಗಿರುವುದರಿಂದ ಅದಕ್ಕೆ ಖರ್ಚು ತಗಲುತ್ತದೆ. ರೈತರಿಗೆ ಈಗ 100-250 ರೂಪಾಯಿಗಳು ಖರ್ಚಾಗುತ್ತಿದೆ ಎಂದು ಮಾನ್ಯ ಶೆಟ್ಟರು ಏನು ಹೇಳಿದ್ದಾರೆ, ಅದನ್ನು ನಾನು ಒಪ್ಪುವುದಿಲ್ಲ. ಏಕೆಂದರೆ ಈ ಹಿಂದೆ ರೆವಿನ್ಯೂ ಇನ್‌ಸ್ಪೆಕ್ಟರ್ ಮತ್ತು ಗ್ರಾಮಲೆಕ್ಕಿಗರಿಂದ ಎಷ್ಟು ತೊಂದರೆಯಾಗುತ್ತಿತ್ತು ಎಂಬುದು ಎಲ್ಲರಿಗೂ ಗೊತ್ತು. ಜನ ಈಗ ನಿರಾಳವಾಗಿ ದಾಖಲೆಯನ್ನು ತೆಗೆದುಕೊಂಡು ಹೋಗುತ್ತಿದ್ದಾರೆ. ನಾಳೆ ಇದನ್ನು ಹೋಬಳಿ ಕೇಂದ್ರಕ್ಕೂ ನಾವು ವಿಸ್ತರಣೆ ಮಾಡಿದರೆ ಖರ್ಚು ಕಡಿಮೆಯಾಗುತ್ತದೆ ಮತ್ತು ಮನೆ ಮುಂದೆ ಅವರಿಗೆ ಪಹಣಿ ಸಿಗುತ್ತದೆ. ಈಗ ರೈತರಿಗೆ ಒಂದೊಂದು ಪ್ರತಿಯನ್ನು ಪ್ರತಿ ವರ್ಷ ಉಚಿತವಾಗಿ ಕೊಡಬೇಕೆಂದು ವ್ಯವಸ್ಥೆ ಮಾಡಿದ್ದೇವೆ. ಇದರಿಂದ ರೈತರಿಗೆ ಅನುಕೂಲವಾಗುತ್ತಿದೆ. ತಾವು ಹೇಳಿದಹಾಗೆ ಎಲ್ಲಾ ಕೇಂದ್ರಗಳಿಗೂ ಸಹ ಮತ್ತು ಹೋಬಳಿಗಳಿಗೂ ಇದನ್ನು ಮಾಡತಕ್ಕಂಥ ಪ್ರಯತ್ನ ಮಾಡುತ್ತೇವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಬರಗಾಲ ಪರಿಸ್ಥಿತಿ ಬಗ್ಗೆ ಈ ಹಿನ್ನಲೆಯಲ್ಲಿ ಮಾತನಾಡುವಾಗಲೇ ಈ ವಿಷಯವನ್ನು ನಾನು ಪ್ರಸ್ತಾಪ ಮಾಡಿದ್ದೆ. ರೈತರ ಬೆಳೆಗಳಿಗೆ ಇವತ್ತು ಯೋಗ್ಯ ಬೆಲೆ ಇಲ್ಲ. ಮಾನ್ಯ ಕಂದಾಯ ಸಚಿವರನ್ನು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಬರಗಾಲ ಪರಿಸ್ಥಿತಿ ಇದೆ, ಬೆಳೆಗೆ ಬೆಲೆಗಳೆಲ್ಲಾ ಕಡಿಮೆಯಾಗಿದೆ. ಈಗ ಹದಿನೈದು ರೂಪಾಯಿ ಮಾಡಿರುವುದು ಬಹಳ ದುಬಾರಿಯಾಗುತ್ತದೆ ಎನ್ನುವುದು ಇಡೀ ರಾಜ್ಯದ ಜನತೆಯ ಭಾವನೆ ಆಗಿದೆ. ಹೀಗಾಗಿ ಮಾನವೀಯತೆ ದೃಷ್ಟಿಯಿಂದ ಇದನ್ನು ಆದಷ್ಟು ಶೀಘ್ರದಲ್ಲಿ 5 ರೂಪಾಯಿ ಎಂದು ಘೋಷಣೆ ಮಾಡುವುದಕ್ಕೆ ಸರ್ಕಾರ ಸಿದ್ಧವಿದೆಯೇ ಎಂದು ಕೇಳುತ್ತೇನೆ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ : ಎಲ್ಲಾ ಹೋಬಳಿಗಳಿಗೆ ಇದನ್ನು ವಿಸ್ತರಣೆ ಮಾಡಬೇಕಾಗಿರುವುದರಿಂದ ಸದ್ಯಕ್ಕೆ ಅದು ಸ್ವಲ್ಪ ಕಷ್ಟವಾಗುತ್ತದೆ. ಮುಂದೆ ಇದನ್ನು ಹೋಬಳಿ ಕೇಂದ್ರಗಳಿಗೆ ವಿಸ್ತರಣೆ ಮಾಡಿದಾಗ ಕಡಿಮೆ ಮಾಡೋಣ.